ಇರುತ್ತಿದ್ದ ಮೇಡಂ, ಆಗೀಗ ತವರೂರು ದಬ್ಬೆಗೆ ಬಂದು ಕೆಲ ದಿನಗಳು ಉಳಿಯುತ್ತಿದ್ದರು ಎಂದು ತಿಳಿದಿತ್ತು. ಕಾಫಿ ತೋಟದ ಮಧ್ಯದಲ್ಲಿ ಕಟ್ಟಿದ್ದ ಅವರ ತವರು ಮನೆಯ ಪಕ್ಕದಲ್ಲೇ ಅವರಿಗೆಂದೇ ಒಂದು ಮನೆಯನ್ನು ಪ್ರತ್ಯೇಕವಾಗಿ ಕಟ್ಟಿಕೊಟ್ಟಿರುವ ಸುದ್ದಿ ಬಂದಿತ್ತು. ಒಮ್ಮೆ ಅವರನ್ನು ನೋಡಿ ಬರೋಣವೆಂದು ನಿರ್ಧರಿಸಿ, ಮೊದಲೇ ಅವರ ಮನೆಯವರಿಗೆ ತಿಳಿಸಿ, ಮೊದಲ ಬಾರಿಗೆ ನಾವು ಕೆಲವು ಗೆಳತಿಯರು ಅವರ ಮನೆಗೆ ಹೊರಟೆವು. ಮೇಡಂ ಅವರನ್ನು ಮೊದಲ ಬಾರಿಗೆ ಈ ಸ್ಥಿತಿಯಲ್ಲಿ ಕಂಡ ನನಗೆ ಅವರೊಂದು ಮಗುವೆಂದೂ, ಅವರು ಈ ಲೋಕದವರಲ್ಲವೇ ಅಲ್ಲ, ಯಾವುದೋ ಅಗೋಚರ ಲೋಕದಲ್ಲಿ ಸೇರಿಹೋಗಿದ್ದಾರೆ ಎಂದು ಭಾಸವಾಗಿಬಿಟ್ಟಿತ್ತು! ಅವರು ತಮ್ಮ ಕೆಲಸದಲ್ಲಿ ಸಾಧಿಸಿದ್ದ ಔನ್ನತ್ಯ, ಏರಿದ್ದ ಎತ್ತರ, ಮಾಡಿದ್ದ ಸಾಧನೆ ಎಲ್ಲವೂ ಅವರ ವ್ಯಕ್ತಿತ್ವದಿಂದ ಆವಿಯಾಗಿ ಹೋಗಿತ್ತು! ಒಂದು ಮುಗ್ಧ ಮಗುವಿನಂತಹ ಮಾತು, ನಡವಳಿಕೆ ಮತ್ತು ಸ್ನಿಗ್ಧ ನಗು ಮಾತ್ರ ಅವರಲ್ಲಿ ಉಳಿದಿತ್ತು. ಅದನ್ನು ಕಂಡು ಸಂಕಟ ಮತ್ತು ವಿವರಿಸಲಾಗದ ತಳಮಳ ನನ್ನನ್ನು ಆವರಿಸಿತ್ತು. ಆದರೆ ಒಂದಿನಿತೂ ಕಹಿ, ಕೊಂಕು, ಅಸಹನೆ, ಉದ್ವೇಗದ ಭಾವನೆಗಳಿಲ್ಲದ, ಹಿಂದಿನದನ್ನೆಲ್ಲಾ ಮರೆತು ನಿರುಮ್ಮಳವಾಗಿರುವ ಅಂತಹ ನಿರ್ಲಿಪ್ತ ಸ್ಥಿತಿಯನ್ನು ಸಾಮಾನ್ಯರಾದವರು ತಲುಪಲು ಎಷ್ಟು ಕಷ್ಟಪಡಬೇಕಲ್ಲಾ ಎಂದು ಆಗ ತೀವ್ರವಾಗಿ ಯೋಚಿಸಿದ್ದೆ.

ಅವರ ತಂದೆ-ತಾಯಿ ವಿಜಯಾ ಮೇಡಂ ಅವರ ಬಾಲ್ಯದ ಕುರಿತು ಉತ್ಸಾಹದಿಂದ ವಿವರಿಸುವಾಗ ಅವರ ಬಗೆಗಿನ ಗೌರವ ಮತ್ತಷ್ಟು ಹೆಚ್ಚಿತ್ತು. ಹಾಸನ ಜಿಲ್ಲೆಯ, ಬೇಲೂರು ತಾಲ್ಲೂಕಿನ, ದಬ್ಬೆ ಎಂಬ ಗಡಿ ಭಾಗದ ಪುಟ್ಟ ಗ್ರಾಮದಲ್ಲಿ 1951ರಲ್ಲಿ ಜನಿಸಿದ ವಿಜಯಾ ದಬ್ಬೆಯವರದ್ದೊಂದು ಹೋರಾಟದ ಬದುಕು. ದಬ್ಬೆಯಲ್ಲಿ ಆ ಕಾಲಕ್ಕೆ ಶಿಕ್ಷಣ ಸೌಲಭ್ಯಗಳಿಲ್ಲದಿದ್ದಾಗ, ಅಪ್ಪನೊಂದಿಗೆ ಹಟ ಹಿಡಿದು, ಪರ ಊರಿನಲ್ಲಿದ್ದ ಸಂಬಂಧಿಕರ ಮನೆಯಲ್ಲಿ ಉಳಿದು ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದ್ದರಂತೆ. ಆನಂತರ ಹಾಸನ ಸೇರಿ ಮನೆ ಬಾಡಿಗೆಗೆ ಮಾಡಿಕೊಂಡು, ಹೈಸ್ಕೂಲಿಗೆ ಸೇರಿದ್ದರು. ತಮ್ಮ-ತಂಗಿಯರನ್ನೂ ಜೊತೆಗಿರಿಸಿಕೊಂಡು ಅಡುಗೆ, ಮನೆವಾರ್ತೆ ನೋಡಿಕೊಳ್ಳುತ್ತಾ, ಓದಿ, ಪದವಿ ಹಂತದ ವಿದ್ಯಾಭ್ಯಾಸ ಹಾಸನದಲ್ಲೇ ಮುಗಿಸಿದ್ದರು. ಮುಂದೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆಯುವವರೆಗೆ, ನಂತರ ವಿಶ್ವವಿದ್ಯಾಲಯದಲ್ಲಿಯೇ ಕೆಲಸಕ್ಕೆ ಸೇರುವವರೆಗೂ ಅವರದು ಮುಕ್ಕಾಗದ ಛಲ. ಆನಂತರ ಪ್ರೀತಿಸಿದ ವಿದೇಶಿ ವಿದ್ವಾಂಸರೊಂದಿಗೆ ವಿವಾಹ... ಒಬ್ಬಳು ಮಗಳು. ಕಡು ಸಂಪ್ರದಾಯಸ್ಥ ಕುಟುಂಬದಲ್ಲಿ ಹುಟ್ಟಿ ಬೆಳೆದ ಹೆಣ್ಣುಮಗಳೊಬ್ಬಳಿಗೆ, ಇಷ್ಟೆಲ್ಲಾ ವೈಚಾರಿಕವಾಗಿ, ಪ್ರಬುದ್ಧವಾಗಿ ಬೆಳೆಯಲು ಹೇಗೆ ಸಾಧ್ಯವಾಯ್ತು? ಆ ಕಾಲಕ್ಕೇ ಇಂತಹ ದಿಟ್ಟತನ ಎಲ್ಲಿಂದಾ ಬಂತು?

ಅಪಘಾತಕ್ಕೊಳಗಾಗಿ ಜರ್ಝರಿತರಾಗಿದ್ದ ಇವರನ್ನು ಭಾರತದಲ್ಲಿಯೇ ಬಿಟ್ಟು, ಅವರ ಪತಿ ತಮ್ಮ ಮಗಳನ್ನು ಕರೆದುಕೊಂಡು ವಿದೇಶಕ್ಕೆ ವಾಪಸ್ಸಾದ ಸುದ್ದಿಯನ್ನು ಕೊಂಚ ಬೇಸರ, ನಿರ್ಭಾವುಕತೆ, ಆಳದ ನೋವಿನೊಂದಿಗೆ ವಿಜಯಾ ಮೇಡಂ ಅವರ ಸಹೋದರರು ಮತ್ತು ಕುಟುಂಬದವರು ಹಂಚಿಕೊಳ್ಳುವಾಗ ಸಂಕಟವಾಗುತ್ತಿತ್ತು. ಏನೊಂದೂ ನಿರ್ಧರಿಸಲಾಗದೇ ಮನಸು ಗೊಂದಲಗೊಳ್ಳುತ್ತಿತ್ತು. ಸಂಬಂಧಗಳ ಸೂಕ್ಷ್ಮ ಎಳೆಗಳ ಕಸೂತಿಯಲ್ಲಿ ಯಾವಾಗ, ಹೇಗೆ ಗೋಜಲು ಉಂಟಾಗುತ್ತದೋ, ಎಲ್ಲಿ ಪಿಸುಕುತ್ತದೋ, ತುಂಡರಿಸಿಬೀಳುತ್ತದೋ ಬಹುಶಃ ಅದರಲ್ಲಿ ತೊಡಗಿದ್ದವರಿಗೆ ಮಾತ್ರ ಗೊತ್ತಾಗಬಹುದು!

2018ರ ಫೆಬ್ರುವರಿ 23ರಂದು ಅವರು ಸಾವಿಗೀಡಾಗುವ ಮೊದಲಿನ, ಕೊನೆಯ ಏಳೆಂಟು ವರ್ಷಗಳಿಂದಷ್ಟೇ ವಿಜಯಾ ಮೇಡಂ ಒಂದಿಷ್ಟು ಚೇತರಿಸಿಕೊಂಡಿದ್ದರು ಎಂದು ನನಗನ್ನಿಸುತ್ತಿತ್ತು. ಅವರು ಅಪಘಾತಕ್ಕೀಡಾಗಿ ನೆನಪಿನಶಕ್ತಿ ಕಳೆದುಕೊಂಡ ನಂತರದ ವರ್ಷಗಳಲ್ಲಿ ಹಲವು ಬಾರಿ ಅವರನ್ನು ಭೇಟಿಯಾಗಿದ್ದೇನೆ. ಮೊದಲ ಬಾರಿಗೆ ಅವರನ್ನು ಭೇಟಿ ಮಾಡಲು ಹೋದಾಗ ಅವರ ಲೈಬ್ರರಿ ಶೋಕೇಸಿನಲ್ಲಿದ್ದ ಹಾಮಾನಾ ಅವರ ಫೋಟೋ ನೋಡಿ ನಾವು ಗೆಳತಿಯರು ಅವರ ಹೆಸರನ್ನು ಉದ್ಗರಿಸಿದಾಗ, ಮೇಡಂ ಥಟ್ಟನೆ, 'ಅವರ ಪತ್ನಿಯೇ ಈ ಫೋಟೋ ಕೊಟ್ಟದ್ದು' ಎಂದರು. ಆಗ ನನಗೆ ಬೆರಗಾಗಿತ್ತು. ನಿಜಕ್ಕೂ ಮೇಡಂಗೆ ಎಲ್ಲವೂ ಮರೆತುಹೋಗಿದೆಯಾ? ಅಥವಾ ತಮಗೆ ಆಪ್ತವಾದ ಒಂದಿಷ್ಟು ಏನಾದರೂ ನೆನಪಿರಬಹುದಾ ಎನ್ನಿಸಿತ್ತು. ಹೀಗೆ ಮತ್ತೆ ಮತ್ತೆ ಅವರನ್ನು ಆಗೀಗ